ಆಸಕ್ತಿ ಹೆಚ್ಚು, ಈ ಸಂಕಲನವನ್ನು ಓದಿಸು ಅಂತ ಹೇಳಿದ್ದು ಅವಳೇ ಅಂತ ಹೇಳಿ ಕಾರು ಹತ್ತಿದ.

ಆ ಬಯಲಾಟ ಕತೆ ನಿನಗೆ ಎಲ್ಲಿ ಸಿಕ್ಕಿತು ಅಂತ ಕೇಳಬೇಕಾದ ಪ್ರಶ್ನೆ ನನ್ನ ಗಂಟಲೊಳಗೇ ಉಳಿಯಿತು.

★★★

ಅದಾದಮೇಲೆ ನಾನು ಹೆಚ್ಚು ನಿದ್ದೆಮಾತ್ರೆ ತೆಗೆದುಕೊಳ್ಳಲು ಶುರು ಮಾಡಿದೆ. ಹಗಲೆಲ್ಲಾ ತುಂಬ ನಿದ್ದೆ ಬರುತ್ತಿತ್ತು, ರಾತ್ರಿ ಮಲಗಿದರೆ ಥಟ್ಟನೆ ನಿದ್ದೆ, ಅರ್ಧ ಗಂಟೆಗೆಲ್ಲಾ ಎಚ್ಚರ, ಓದಲೋ, ಸಿನಿಮಾ ನೋಡಲೋ ಕುಳಿತರೆ ಅನಾಸಕ್ತಿ, ಹೊರಗಿನ ಸದ್ದುಗಳನ್ನೆಲ್ಲಾ ಕೇಳುತ್ತಾ ರಾತ್ರಿ ಕಳೆದು ಬೆಳಗು ಮಾಡಬೇಕಾಗುತ್ತಿತ್ತು. ಇತ್ತೀಚಿಗಿನ ಈ ವಿಚಿತ್ರ ನಡವಳಿಕೆಗಳನ್ನೆಲ್ಲಾ ವರದಿಯೊಪ್ಪಿಸಿ ನನ್ನ ಡಾಕ್ಟರ್ ಮಿತ್ರನ ಬಳಿ ಕರೆದೊಯ್ದಿದ್ದಳು ಯಶೋದಾ. ಆದರೆ ಎಲ್ಲಾ ಸರಿ ಉಂಟು, ಕೆಲವರಿಗೆ ನಿದ್ದೆ ಕಮ್ಮಿಯಾಗುತ್ತಾ ಹೋಗುವುದು ವಯೋಸಹಜ ಅಂತ ಹೇಳಿ ಮಾತ್ರೆ ಬರೆದು ಕೊಟ್ಟಿದ್ದರು.

ನಿದ್ದೆಮಾತ್ರೆ ತೆಗೆದುಕೊಳ್ಳಲು ನನಗೆ ಲೈಸೆನ್ಸ್ ಕೊಟ್ಟ ಹಾಗಾಗಿತ್ತು.

ಅವನ ನಂಬಿಕೆಯಂತೇ ವಿಶ್ವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂತು. ಶಿವಕುಮಾರನೇ ಈ ಸುದ್ದಿ ಕೊಟ್ಟ. ಒಂದು ಮೆಸೇಜು ಮಾಡಿ ವಿಶ್ ಮಾಡಿ ಸುಮ್ಮನಾಗೋಣ ಅಂದರೆ ಆ ಮೆಸೇಜು ನೋಡುತ್ತಲೇ ವಿಶ್ವ ಫೋನೇ ಮಾಡಿಬಿಟ್ಟ. ಪ್ರಶಸ್ತಿ ಸಿಕ್ಕಿದ್ದಕ್ಕೆ ತುಂಬ ಮಾಧ್ಯಮ ಮಿತ್ರರು ಅವನ ಅಭಿಪ್ರಾಯ ಕೇಳಲು ಫೋನ್ ಮಾಡುತ್ತಲೇ ಇದ್ದರು, ಇವನು ಮಾತ್ರ ನನ್ನ ಜೊತೆ ಮಾತಾಡುತ್ತಾ ಅವರ ಅಭಿನಂದನೆಯನ್ನು ಮುಂದಕ್ಕೆ ಹಾಕುತ್ತಿದ್ದ. ಮಾತಾಡುತ್ತಾ ಮಾತಾಡುತ್ತಾ ಸಂತೋಷಕ್ಕೆ ಗಳಗಳನೆ ಅತ್ತುಬಿಟ್ಟ. ನಾವು ಹಳೆ ಸ್ನೇಹಿತರೆಲ್ಲಾ ಒಮ್ಮೆ ಒಟ್ಟಿಗೇ ಸೇರೋಣ, ಪಾರ್ಟಿ ಮಾಡೋಣ, ಹಳೆ ಕತೆಗಳನ್ನು ಹರಟೋಣ, ಸಂಭ್ರಮಿಸೋಣ, ನೀವೆಲ್ಲಾ ಬಂದರೆ ಖಂಡಿತ ಸುರಭಿಯೂ ಬರುತ್ತಾಳೆ. ಇಲ್ಲವೆಂದರೆ ಅವಳನ್ನು ಮನೆಯಾಚೆ ಹೊರಡಿಸುವುದೇ ಕಷ್ಟ ಅಂತೆಲ್ಲಾ ವಿಶ್ವ ಹೇಳುತ್ತಲೇ ಹೋದ.

ಅವನಿಗೆ ನನ್ನ ಜೊತೆಗಿನ ಮಾತಿನಿಂದ ಸಿಗುವುದು ಸಂಭ್ರಮವಾ, ಸಂಕಟವಾ, ಬಿಡುಗಡೆಯಾ— ಒಂದೂ ಅರ್ಥವಾಗದೇ ಆ ಕ್ಷಣ ಅವನ ಮಾತಿಗೆ ಸ್ಪಂದಿಸುವುದೇ ಆದಷ್ಟು ಪ್ರಾಮಾಣಿಕವಾದ ಪ್ರಯತ್ನ ಅಂತ ಹೂಂಗುಟ್ಟುತ್ತಾ ಹೋದೆ.

★★★

ಅದೇನು ವಿಚಿತ್ರ ಸಂಯೋಗವೋ ಏನೋ – ನಾನು, ವಿಶ್ವ ಒಟ್ಟಿಗೇ ಮತ್ತೆ ಸೇರಬೇಕಾಯಿತು. ಪಾರ್ಟಿ ಒಂದು ನೆಪ. ಮನೆಗೆ ಯಾರೋ ನೆಂಟರು ಬಂದಿದ್ದಾರೆ, ಸುರಭಿ ತಡವಾಗಿ ಬರುತ್ತಾಳಂತೆ ಅಂತ ಹೇಳಿ ವಿಶ್ವ ಪಾರ್ಟಿಯನ್ನು ಶುರು ಮಾಡಿದ. ಅವನ ಕತೆಗಳ ಬಗ್ಗೆ ಹಲವಾರು ವಿವರಗಳನ್ನು ಬಿಚ್ಚಿಡುತ್ತಾ ಹೋದ. ನಾನು ಬೆವರತೊಡಗಿದೆ, ರಾತ್ರಿ ಕಳೆಗಟ್ಟುತ್ತಿರುವಂತೇ, ನಮ್ಮ ಮೈಮನಗಳನ್ನು ನಶೆ ತನ್ನ ವಶಕ್ಕೆ ತೆಗೆದುಕೊಳ್ಳುತ್ತಿರುವ ಹಾಗೇ ಆವೇಶದಲ್ಲಿ ಎಲ್ಲಿ ನಮ್ಮ ನಮ್ಮ ಬಾಯಿಗಳಿಂದ ನಿಜಗಳು ಆಚೆ ಬಂದು ಬಯಲಾಟ ನಡೆಸಿಬಿಡುತ್ತವೋ ಅನ್ನುವ ಹೆದರಿಕೆ ಸುಪ್ತವಾಗಿ ಒಳಗೆ ಇದ್ದೇ ಇತ್ತು.

ಹಾಗಿರುವಾಗ ಆ ಅನಾಹುತ ನಡೆಯಿತು. ಇದ್ದಕ್ಕಿದ್ದಂತೇ ವಿಶ್ವ ಬಡಬಡಿಸತೊಡಗಿದ. ಎಲ್ಲ ವಿಮರ್ಶಕರೂ ಬಯಲಾಟ ಕತೆಯನ್ನು ಬಹುವಾಗಿ ಮೆಚ್ಚಿಕೊಳ್ಳುತ್ತಿದ್ದಾರೆ, ಅದೇನು ಇದೆಯೋ ಆ ಕತೆಯಲ್ಲಿ ಅಂತ ಹೇಳಿದ. ಕಣ್ಣಲ್ಲಿ ಕಣ್ಣಿಡಲು ನನಗೆ ಸಾಧ್ಯವಾಗಲಿಲ್ಲ. ಬೇರೆ ಬೇರೆ ಕತೆಗಳನ್ನೆಲ್ಲಾ ಹೆಸರಿಸುತ್ತಾ, ಅದನ್ನು ಅಷ್ಟು ಚೆನ್ನಾಗಿ ಬರೆದಿದ್ದೇನೆ, ಇದೇ ಯಾಕೆ ಇಷ್ಟವಾಗಬೇಕು ಅಂತ ತಕರಾರು ತೆಗೆದ. ಮರುಮುದ್ರಣದಲ್ಲಿ ಆ ಕತೆಯನ್ನು ಕಿತ್ತು ಹಾಕಿಬಿಡುತ್ತೇನೆ ಅಂತ ಹೂಂಕರಿಸಿದ.